UASB LIBRARY
Newspaper Clippings
Pg .1 Tuesday 07-12-2021 Jai Kisan



ಮಣ್ಣಿನ ಆರೋಗ್ಯ ಕಾಪಾಡಿದರೆ ಮಾತ್ರ ಮನುಷ್ಯರ ಆರೋಗ್ಯ ಸುಧಾರಣೆ ಸಾಧ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ಮಣ್ಣಿನ ಆರೋಗ್ಯ ಕಾಪಾಡಿದರೆ ಮಾತ್ರ ಮನುಷ್ಯರ ಆರೋಗ್ಯ ಸುಧಾರಣೆ ಸಾಧ್ಯ ಎಂದು ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ನಿರ್ದೇಶಕ ಡಾ. ಬಿ.ಎನ್.ಎಸ್. ಮೂರ್ತಿ ತಿಳಿಸಿದರು.

'ಮಣ್ಣಿನ ಕ್ವಾರ ನಿಲ್ಲಿಸಿ, ಮಣ್ಣಿನ ಉತ್ಪಾದಕತೆ ಉತ್ತೇಜಿಸಿ' ಎಂಬ ಧ್ಯೇಯವಾಕ್ಯದಡಿ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಹಮ್ಮಿಕೊಂಡಿದ್ದ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮದಲ್ಲಿ ಸೋಮವಾರ ಅವರು ಮಾತನಾಡಿದರು.

''ತೋಟಗಾರಿಕಾ ಬೆಳೆಗಳಲ್ಲಿ ಹೆಚ್ಚಾಗಿ ಕಂಡುಬರುವ ಲಘು ಪೋಷಕಾಂಶಗಳ ಕೊರತೆಗೆ ಮುಖ್ಯವಾಗಿ ಮಣ್ಣಿನ ಅನಾರೋಗ್ಯವೇ ಕಾರಣ. ಇಡೀ ದೇಶದಲ್ಲೇ ಕೇಂದ್ರ ಸರಕಾರ ಮಣ್ಣಿನ ಫಲವತ್ತತೆಗೆ ನೀಡುತ್ತಿರುವ ಮಹತ್ವ, ನಾನಾ ಯೋಜನೆಗಳು, ಅದರಲ್ಲೂ ಮಣ್ಣು ಪರೀಕ್ಷೆ ಆಧಾರಿತ 'ಮಣ್ಣಿನ ಆರೋಗ್ಯ ಪತ್ರ' ವಿತರಣೆ ಬಹಳ ಪ್ರಮುಖವಾಗಿದೆ,'' ಎಂದರು.



ರೈತರಿಗೆ ಮಣ್ಣು ಆರೋಗ್ಯ ಪತ್ರ ವಿತರಿಸಿದ ಡಾ.ಬಿ.ಎನ್.ಎಸ್ ಮೂರ್ತಿ, ಡಾ.ಕೆ.ನಾರಾಯಣಗೌಡ.

ಐಐಎಚ್‌ಆರ್‌ನಲ್ಲಿ ವಿಶ್ವ ಮಣ್ಣಿನ ದಿನಾಚರಣೆ

ಬೆಂಗಳೂರು ಕೃಷಿ ವಿವಿ ವಿಶ್ರಾಂತ ಕುಲಪತಿ ಡಾ.ಕೆ. ನಾರಾಯಣಗೌಡ ಮಾತನಾಡಿ, ''ಸಮಗ್ರ ಕೃಷಿಯಿಂದ ಮಾತ್ರ ಮಣ್ಣಿನ ಜತೆಗೆ ರೈತನ ಆರ್ಥಿಕ ಸುಧಾರಣೆ ಸಾಧ್ಯ. ನಿಖರವಾದ ಮಣ್ಣು ಪರೀಕ್ಷೆಗಳು ಜರುಗಿ, ರೈತರಿಗೆ ಇದರ ಮಹತ್ವ ತಿಳಿಸಿದಾಗ ಮಾತ್ರ ಎಲ್ಲಾ ರೈತರು ಕೃಷಿಯನ್ನು ಲಾಭದಾಯಕ ಮಾಡಬಲ್ಲರು,'' ಎಂದರು.

ಕಾರ್ಯಕ್ರಮದಲ್ಲಿ ಐಐಎಚ್‌ಆರ್‌ನ ನಿವೃತ್ತ ಪ್ರಧಾನ ವಿಜ್ಞಾನಿ ಡಾ. ಎ.ಎನ್. ಗಣೇಶಮೂರ್ತಿ, ನೈಸರ್ಗಿಕ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಹಾಗೂ ಮಣ್ಣು ಶಾಸ್ತ್ರ ವಿಜ್ಞಾನಿ ಡಾ. ಎಚ್.ಬಿ. ರಘುಪತಿ, ಪ್ರಧಾನ ವಿಜ್ಞಾನಿ ಡಾ. ಜಿ.ಎಸ್. ಸತೀಶ್, ಡಾ.ಬಿ. ನಾರಾಯಣಸ್ವಾಮಿ, ಡಾ. ಟಿ. ರೂಪಾ, ಡಾ. ಸೆಲ್ವಕುಮಾರ್, ಡಾ. ಕಲೈವಣ್ಣನ್, ಡಾ. ಜಿ.ಆರ್. ಸ್ಮಿತಾ ರೈತರಿಗೆ ಮಾಹಿತಿ ಒದಗಿಸಿದರು. ಒಟ್ಟು 556 ಮಣ್ಣು ಆರೋಗ್ಯ ಪತ್ರ ವಿತರಣೆ ಮಾಡಲಾಯಿತು. ಇದೇ ವೇಳೆ ಚಿಕ್ಕಬಳ್ಳಾಪುರದ ಸಂಪತ್ ಕುಮಾರ್ ಮತ್ತು ಹೆಸರಘಟ್ಟದ ಅಮರ್ ಅವರನ್ನು ಸನ್ಮಾನಿಸಲಾಯಿತು.

140 ರೂ. ದಾಟಿದ ಟೊಮ್ಯಾಟೊ ಬೆಲೆ

ನವದೆಹಲಿ: ದೇಶಾದ್ಯಂತ ಟೊಮ್ಯಾಟೊ ಬೆಲೆಯಲ್ಲಿ ಭಾರಿ ಏರಿಳಿತ ಕಂಡುಬರುತ್ತಿದೆ. ದೇಶದ ಉತ್ತರ ರಾಜ್ಯಗಳಲ್ಲಿ ಕೆಜಿಗೆ 40-50 ರೂ.ನಂತೆ ಮಾರಾಟವಾಗುತ್ತಿರುವ ಟೊಮ್ಯಾಟೊ ದಕ್ಷಿಣ ಭಾರತ ರಾಜ್ಯಗಳಲ್ಲಿ 140 ರೂ. ದಾಟಿದೆ. ಮುಂಬೈನಲ್ಲಿ 55, ದೆಹಲಿಯಲ್ಲಿ 56, ಕೊಲ್ಕತದಲ್ಲಿ 75 ರೂ. ಪ್ರತಿ ಕೆಜಿಯಂತೆ ಮಾರಾಟವಾಗುತ್ತಿದೆ. ಆದರೆ ಅಂಡಮಾನ್‌ನ ಪೋರ್ಟ್‌ಬ್ಲೇರ್‌ನಲ್ಲಿ 127 ರೂ. ಮಾಯಾಬಂದರ್‌ನಲ್ಲಿ ಕೆಜಿಗೆ 140 ರೂ. ತಲುಪಿದೆ. ಕೇರಳದ ಹಲವು ಭಾಗಗಳಲ್ಲಿ 125 ರೂ. ದಾಟಿದೆ. ತಿರುವನಂತಪುರದಲ್ಲಿ 105 ರೂ., ಪಾಲಕ್ಕಾಡ್, ವಯನಾಡಿನಲ್ಲಿ 95 ರೂ.



ನಂತೆ ಮಾರಾಟವಾಗುತ್ತಿದೆ. ಕರ್ನಾಟಕದ ಹಲವೆಡೆ 100 ರೂ. ದಾಟಿದೆ. ತಮಿಳುನಾಡಿನ ರಾಮೇಶ್ವರಂನಲ್ಲಿ 102 ರೂ. ಆಗಿದೆ. ಕರ್ನಾಟಕ, ಪಂಜಾಬ್, ಉತ್ತರ ಪ್ರದೇಶ, ಹರಿಯಾಣ, ಹಿಮಾಚಲ ಪ್ರದೇಶದಲ್ಲಿ ಅಕಾಲಿಕ ಮಳೆಯಾಗಿ ಬೆಳೆ ಹಾನಿ ಸಂಭವಿಸಿದ ಕಾರಣ ಟೊಮ್ಯಾಟೊ ಕೊರತೆ ಉಂಟಾಗಿದೆ. ಈ ಕಾರಣಕ್ಕೆ ಬೆಲೆಯಲ್ಲಿ ಭಾರಿ ಏರಿಕೆ ಕಂಡುಬರುತ್ತಿದೆ.

ನಂದಿನಿಕುಮಾರಿ ಕೃಷಿ ಇಲಾಖೆ ನಿರ್ದೇಶಕಿ



ಬೆಂಗಳೂರು: ಕೃಷಿ ಇಲಾಖೆ ನೂತನ ನಿರ್ದೇಶಕಿಯಾಗಿ ನಂದಿನಿಕುಮಾರಿ ಸೋಮವಾರ ಅಧಿಕಾರ ಸ್ವೀಕರಿಸಿದರು. ಬಿ.ವೈ. ಶ್ರೀನಿವಾಸ್ ವರ್ಗಾವಣೆ ಹಿನ್ನೆಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿದ್ದ ನಂದಿನಿಕುಮಾರಿ ಈ ಹುದ್ದೆ ಅಲಂಕರಿಸಿದ್ದಾರೆ. ನೂತನ ನಿರ್ದೇಶಕರಿಗೆ ಶುಭಹಾರೈಸಿರುವ ಕೃಷಿ ಸಚಿವ ಬಿ.ಸಿ.ಪಾಟೀಲ್, ರೈತರಿಗೆ ಹಾಗೂ ಕೃಷಿಗೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸಿ ಎಂದಿದ್ದಾರೆ.

07-12-2021
Vv Pg 09

07-12-2021
Vk Pg 08

ಬೆಲೆ ಇದ್ದರೂ ಬೆಳೆ ಇಲ್ಲ; ಅಕಾಲಿಕ ಮಳೆ ತಂದ ಸಂಕಷ್ಟ

ಏರುಗತಿಯಲ್ಲಿ ಅರೇಬಿಕಾ ಕಾಫಿ ಧಾರಣೆ

• ಆದಿತ್ಯ ಕೆ.ಎ.

ಮಡಿಕೇರಿ: ಅತಿವೃಷ್ಟಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಕಾಫಿ ಬೆಳೆಗಾರರಿಗೆ ಅರೇಬಿಕಾ ಪಾರ್ಚ್‌ಮೆಂಟ್‌ನ ಧಾರಣೆ ಏರಿಕೆಯು ತುಸು ನೆಮ್ಮದಿ ತಂದಿದೆ. ಆದರೆ, ಈಚೆಗೆ ಸುರಿದ ಅಕಾಲಿಕ ಮಳೆಯಿಂದಾಗಿ ಫಸಲು ನೆಲಕಚ್ಚಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ, ಶನಿವಾರಸಂತೆ, ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಚಿಕ್ಕಮಗಳೂರು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಸೋಮವಾರ ಅರೇಬಿಕಾ ಪಾರ್ಚ್‌ಮೆಂಟ್‌ನ 50 ಕೆ.ಜಿ ತೂಕದ ಚೀಲಕ್ಕೆ ₹ 15,100ರಿಂದ ₹ 15,250 ದರವಿತ್ತು. 'ಕಾಫಿಗೆ ಮುಕ್ತ ಮಾರುಕಟ್ಟೆ ಲಭಿಸಿದ ಬಳಿಕ ಅರೇಬಿಕಾಗೆ ಸಿಗುತ್ತಿರುವ ಉತ್ತಮ ಬೆಲೆ ಇದು' ಎಂದು ಬೆಳೆಗಾರರು ಹೇಳುತ್ತಾರೆ.

ಕಾಫಿ ದರ ಏರಿಕೆಯು ಅರೇಬಿಕಾ ಪಾರ್ಚ್‌ಮೆಂಟ್‌ಗೆ ಸೀಮಿತವಾಗಿದ್ದು, ಅರೇಬಿಕಾ ಚೆರ್ರಿಯ 50 ಕೆ.ಜಿ ತೂಕದ ಚೀಲಕ್ಕೆ ₹ 6,450ರಿಂದ ₹ 6,500 ಇದೆ. ಅಷ್ಟೇ ತೂಕದ ರೋಬಸ್ಟಾ ಪಾರ್ಚ್‌ಮೆಂಟ್ ಬೆಲೆಯು ₹ 6,100ರಿಂದ ₹ 6,200 ಆಗಿದೆ. ರೋಬಸ್ಟಾ ಚೆರ್ರಿ ಬೆಲೆ ₹ 3,700ಕ್ಕೆ ಸೀಮಿತವಾಗಿದೆ.

ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಅಕಾಲಿಕ ಮಳೆಯಾಗಿ ಕೊಯ್ಲು ಮಾಡಲಾಗದೆ ಫಸಲು ನೆಲ ಕಚ್ಚಿತ್ತು. ಉಳಿದ ಫಸಲು ಕೊಯ್ಲು ಮಾಡಿದ್ದರೂ, ಮೋಡ ಕವಿದ ವಾತಾವರಣವಿರುವುದರಿಂದ ಒಣಗಿಸಲು ರೈತರು ಬಿಸಿಲಿಗಾಗಿ ಕಾಯುತ್ತಿದ್ದಾರೆ.

'ಬ್ರೆಜಿಲ್ ಸೇರಿದಂತೆ ಕಾಫಿ ಬೆಳೆಯುವ ರಾಷ್ಟ್ರಗಳಲ್ಲಿ ಹಿಮಪಾತ ಹಾಗೂ ವಿಪರೀತ ಮಳೆಯಿಂದ ಕಾಫಿ ಉತ್ಪಾದನೆ ಕಡಿಮೆಯಾಗಿದೆ. ನಮ್ಮ ದೇಶದ ಕಾಫಿ ಬೆಳೆಯುವ ಭಾಗದಲ್ಲೂ ಮಳೆಯಿಂದ ಶೇ 30ರಷ್ಟು ಫಸಲು ನೆಲಕಚ್ಚಿದೆ. ಈಗ ಚಳಿ ಅರಂಭವಾಗಿದ್ದು, ಕಾಫಿಗೆ ಬೇಡಿಕೆ ಬಂದಿದೆ. ಬೆಲೆ ಏರಿಕೆಯಾಗಿದೆ' ಎಂದು ಕಾಫಿ ವ್ಯಾಪಾರಿ ಅಬ್ದುಲ್ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಕೊಡಗು, ಚಿಕ್ಕಮಗಳೂರು, ಹಾಸನದಲ್ಲಿ ದರ ಹೆಚ್ಚಳ
- ಅರೇಬಿಕಾ ಪಾರ್ಚ್‌ಮೆಂಟ್ ಗಷ್ಟೇ ಸೀಮಿತ

ಡಿಸೆಂಬರ್‌ನಲ್ಲೂ ಬಿಸಿಲಿಲ್ಲ. ಕಾಫಿಯಲ್ಲಿ ತೇವಾಂಶ ಉಳಿಯುತ್ತಿದೆ. 50 ಕೆ.ಜಿ ತೂಕದ ಚೀಲ ಕೊಂಡೊಯ್ದರೆ, 47 ಕೆ.ಜಿಗೆ ಮಾತ್ರ ಹಣ ನೀಡುತ್ತಾರೆ. 3 ಕೆ.ಜಿ ತೂಕ ಕಳೆಯುತ್ತಾರೆ

ಪ್ರಸಾದ್, ಕಾಫಿ ಬೆಳೆಗಾರ, ಕೊಡ್ಲಿಪೇಟೆ



ಒಣಗಿಸಲು ಹಾಕಿರುವ ಕಾಫಿ ಬೆಳೆ

07-12-2021
Pv Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

Govt move to change rail line leaves 1k farmers in distress

Ryots had parted with 480 acres for Belur-Sakleshpur stretch

RASHMI BELUR
BENGALURU, DHNS

Nearly 1,000 farmers of Belur and Sakleshpur taluks in Hassan district, who were alienated in their own lands for the last two decades after the government notified acquisition of their land for a railway line, are in distress.

Not only were they discouraged from cultivating their land since 1996, when their lands were surveyed for the new railway line between Kadur and Sakleshpur, but the government's unilateral move to shelve the Belur-Sakleshpur stretch of the railway line has left them in the lurch.

The hapless farmers are demanding the government not to cancel the project or at least provide the compensation for their losses. The farmers have even filed a petition in the Karnataka High Court where two hearings were completed. "The notices have been served to the Railway Department and also to the state government," said K Srinivasa Gowda, an advocate who filed a petition on behalf of farmers.



A paddy field in Sakleshpur taluk. Over 1000 farmers in 34 villages in Belur and Sakleshpur taluks were discouraged from tilling lands since 1996 for the Belur-Sakleshpur stretch of the proposed Kadur-Sakleshpur railway line. DH FILE PHOTO

Speaking to *DH*, one of the petitioners H C Nandish from Sakleshpur taluk said, "This was the line promised by former prime minister Indira Gandhi when she had contested elections in Chikkamagalur. Even the funds were allocated in the Union Railway Budget for the new line. We farmers were restricted from taking up tilling, developmental activities or selling our lands. Now, suddenly in 2019, the state government issued a notification about changing the line by dropping Sakleshpur."

The documents accessed by *DH* show that farmers had written to the then Railway minister Piyush Goyal requesting him not to change the railway line. "There have been efforts since 1999 to change the line. When J H Patel was chief minister, he wrote to the then Railway minister Nitish Kumar requesting for diversion of route. But he got a reply that the work on the project is being executed on the alignment as per the original planning," said S V Parameshwaraiah, another aggrieved farmer from Sakleshpur.

As explained by the farmers, the Belur and Sakleshpur area is known for cultivating paddy, coffee and pepper. Since the survey of the land was done, they were restricted even from cultivating.

Farmers said vested interests of a few local politicians was behind the decision to change the original plan.

07-12-2021
Dec Hrd
Pg 01

Fertilizer subsidy to cost 62% more on input costs: Crisil

'Natural gas will contribute to inflating bill by ₹50,000 crore'

PRESS TRUST OF INDIA
MUMBAI

The Centre's fertilizer subsidy bill is set to soar 62% over the budgeted amount to ₹1.3 lakh crore this fiscal due to the massive rise in raw material prices despite lower demand, says a report.

An unprecedented spike in natural gas prices and other raw materials is set to inflate the fertilizer subsidy bill by a whopping 62% or ₹50,000 crore to ₹1,30,000 crore this fiscal over the budgeted ₹79,530 crore.

This is despite sales volume declining 10% from the record level last fiscal, Crisil said in its report on Monday.



To encourage farmers to use fertilizers for better crop yield, government keeps the sale price significantly lower than market rates, and reimburses the difference to manufacturers directly.

But for long, budget provisioning for such subsidies has been inadequate, leading to regular build-up of arrears. However, last fiscal, the government cleared arrears through an additional disbursement of ₹62,638 crore helping firms nurse balance sheets to better health.

However, what followed was a massive spike in input costs, the biggest of which was of natural gas.

Crisil expects the price of natural gas, the feedstock that accounts for 75-80% of the total cost of production for urea plants, to rise more than 50% this fiscal. This is on top of the prices of key raw materials like phosphoric acid and ammonia, for non-urea fertilizer companies, that are already up 40-60% over the past fiscal. All this will now have to be absorbed by the government.

07-12-2021
Hindu
Pg 12

07-12-2021 Times of Ind Pg 04

₹443cr crop loss relief for rain-hit farmers

Insurance To Be Disbursed From Tomorrow

Sandeep.Moudgal
@timesgroup.com



Untimely showers have caused havoc in many parts of the state

Bengaluru: While farmers across Karnataka are crying foul over the poor and delayed disbursal of compensation for crop losses due to unseasonal rain, the government has allocated Rs 443 crore under the State Disaster Response Fund (SDRF). The state has already paid compensation to about 6.6 lakh eligible farmers.

"We had distributed about Rs 132 crore in instalments among the affected farmers before November. Recently, the government released another Rs 311 crore," said Tushar Girinath, principal secretary, revenue department.

He said the compensation was directly credited to farmers' accounts through direct benefit transfer (DBT) after they uploaded crop loss details on the Parihara portal. Girinath added the state government is expecting a claim of another Rs 150 crore in the coming days towards crop losses due to untimely rain.

On the other hand, the agriculture department on Wednesday will launch payment of crop insurance claims to farmers under Pradhan Mantri Fasal Bima Yojana. Insurance companies will start paying farmers in Chitradurga, Kolar, Tumakuru and Koppal in the first phase, where heavy rain-related losses have been reported.

Agriculture commissioner Brijesh Kumar Dikshit said two companies will begin crediting the insurance money of over Rs 80 lakh to farmers who registered their post-harvest losses within 10 days of the incident.

With the unseasonal rain hurting a majority of the southern districts and pockets of North Karnataka, crop losses had been recorded at 10 lakh hectares for the months of September to November. While crops on 5 lakh hectares were destroyed in September and October, the heavy November rain alone flooded 5 lakh hectares and destroyed ragi and maize crops.

Government sources say negotiations are yet to be carried out with other insurance companies that remain non-committal on paying the amount. But farmer-leaders say the money claimed to have been released by the government is not sufficient. Some say farmers haven't received the amount.

"Under SDRF norms, the government is paying Rs 2,500 per acre of crop loss. A farmer pays no less than Rs 3,000 for only labour for sowing. What is the use of such alms given to farmers," questioned Kurbur Shanthakumar of the state farmers' associations union.

Complaints against insurance firms

T Yeshavantha from Karnataka Prantha Raitha Sangha claimed the biggest problem has been disbursal of the insurance amount.

"There is not a single farmer in Mandya who has got the amount for the premium he or she has paid. While the government says it's paying, the farmer gets nothing in most cases as insurance companies have a rule that unless an entire hobli or taluk is washed out and reports crop losses, no individual farmer can claim insurance," said Yeshvantha.

Shanthakumar said government insurance rules need to be amended to help farmers secure higher compensation.

ಬೇಳೆಕಾಳು, ಆಹಾರ ಧಾನ್ಯಗಳ ಬೆಲೆಯಲ್ಲೂ ಏರಿಕೆ

• ದೇವೇಶ ಸೂರಗುಪ್ಪ

ಬೆಂಗಳೂರು: ರಾಜ್ಯದಲ್ಲಿ ಸುರಿದ ಅಕಾಲಿಕ ಮಳೆ ಕೇವಲ ತರಕಾರಿ ಬೆಲೆಗಳ ಮೇಲೆ ಅಷ್ಟೇ ಪರಿಣಾಮ ಬೀರಿಲ್ಲ ಬದಲಾಗಿ ಈಗ ಮೆಣಸಿನ ಕಾಯಿ, ಅಲಸಂದಿ ಕಾಳು, ಅವರೆಕಾಳು, ಹೆಸರುಬೇಳೆ, ಹೆಸರು ಕಾಳು ಸೇರಿದಂತೆ ಬೇಳೆ ಕಾಳು, ಆಹಾರ ಧಾನ್ಯ ಸೇರಿ ಇತರೆ ಅಗತ್ಯ ಪದಾರ್ಥಗಳ ಬೆಲೆ ದುಪ್ಪಟ್ಟಿಗೂ ಕಾರಣವಾಗಿದೆ.



ಈ ಹಿಂದೆ ಕೆ.ಜಿಗೆ 80 ರೂ. ಇದ್ದ ಅಲಸಂದಿಕಾಳು 102 ರೂ.ಗೆ ಏರಿಕೆ ಆಗಿದೆ. ಕೆಜಿಗೆ 52 ರಿಂದ 55 ರೂ. ವರೆಗೆ ಇದ್ದ ಅವರೆಕಾಳು 62ರೂ. ದಿಂದ 65 ರೂ. ವರೆಗೂ ಮಾರಾಟವಾಗುತ್ತಿದೆ. 85ರೂ. ದರ ಇದ್ದ ಹೆಸರು ಬೇಳೆ ಈಗ 93 ರೂ.ಗೆ ಏರಿದೆ.

ಈ ಹಿಂದೆ ಕಡಲೆಕಾಳು ಕೆಜಿಗೆ 58 ರೂ. ಇದ್ದ ಈಗ 64 ರೂ.ಗೆ ಮಾರಾಟವಾಗುತ್ತಿದೆ. 105 ರೂ.ಗೆ ಮಾರಾಟವಾಗುತ್ತಿದ್ದ ಕಡ್ಲೆ ಬೀಜ ಈಗ 115 ರೂ. ತಲುಪಿದೆ. ಜತೆಗೆ ಹುರುಳಿಕಾಳು ಬೆಲೆ 38 ರಿಂದ 43 ರೂ. ವರೆಗೆ ಜಿಗಿತ ಕಂಡಿದೆ ಎಂದು ಯಶವಂತಪುರ ಮಾರುಕಟ್ಟೆಯ ಬೆಳೆಕಾಳು ಪದಾರ್ಥಗಳ ಹೋಲ್ ಸೇಲ್ ವ್ಯಾಪಾರಿ ನೀಲಾದ್ರಿ ಎಂಟರ್ ಪೈಸಸ್ ಮಾಲೀಕ ಸಂದೇಶ್ ಹೇಳುತ್ತಾರೆ.

ಇದೇ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಮೆಣಸಿನ ಕಾಯಿ ಬೆಲೆಯಲ್ಲೂ ಹೆಚ್ಚಳವಾಗಿದೆ. ಯಶವಂತಪುರ ಮಾರುಕಟ್ಟೆಯಲ್ಲಿ ಈ ಹಿಂದೆ ಕ್ವಿಂಟಲ್‌ಗೆ 25 ಸಾವಿರ ರೂ. ದರ ಇದ್ದ ಉತ್ತಮ ಗುಣಮಟ್ಟದ ಬ್ಯಾಡಗಿ ಮೆಣಸಿನ ಕಾಯಿ ಇದೀಗ 27 ರಿಂದ 30 ಸಾವಿರ ರೂ. ವರೆಗೂ ಏರಿಕೆಯಾಗಿದೆ. 12 ಸಾವಿರ ರೂ. ಇದ್ದ ಗುಂಟೂರು ಮೆಣಸಿನಕಾಯಿ 15 ಸಾವಿರ ರೂ. ವರೆಗೂ ತಲುಪಿದೆ.

ಭಾರೀ ಮಳೆಯ ಹಿನ್ನೆಲೆಯಲ್ಲಿ ಮೆಣಸಿನ ಬೆಳೆ ಹಾಳಾಗಿದೆ. ಜತೆಗೆ ಇಳುವರಿ ಕೂಡ ಕಡಿಮೆ ಆಗಿದೆ. ಆ ಹಿನ್ನೆಲೆಯಲ್ಲಿ ಮೆಣಸಿನಕಾಯಿ ಬೆಲೆಯಲ್ಲಿ ಏರಿಕೆ ಕಂಡು ಬಂದಿದೆ ಎಂದು ಯಶವಂತಪುರ ಎಪಿಎಂಸಿಯ ಮೆಣಸಿನಕಾಯಿ ವ್ಯಾಪಾರಿ ಆನಂದ್ ಹೇಳುತ್ತಾರೆ.

ಬಾಸುಮತಿ ಅಕ್ಕಿ ಬೆಲೆ ಏರಿಕೆ

ಬಿರಿಯಾನಿ, ಪಲಾವ್‌ಗೆ ಬಳಕೆ ಮಾಡುವ ಬಾಸುಮತಿ ಅಕ್ಕಿ (ಸ್ಟೀಮ್ ರೈಸ್) ಬೆಲೆಯಲ್ಲಿ 5 ರಿಂದ 10 ರೂ. ಹೆಚ್ಚಳವಾಗಿದೆ. ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಈ ಹಿಂದೆ ಬಾಸುಮತಿ ಅಕ್ಕಿ ಕೆ.ಜಿಗೆ 80 ರೂ.ಗೆ ಖರೀದಿ ಆಗುತ್ತಿತ್ತು. ಆದರೆ ಈಗ 90 ರೂ. ಆಗಿದೆ. ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಂದ ಬಾಸುಮತಿ ರೈಸ್ ಬೆಂಗಳೂರಿಗೆ ಪೂರೈಕೆ ಆಗುತ್ತದೆ.

ಆದರೆ ಮಳೆಯಿಂದಾಗಿ ಆ ಭಾಗಗಳಲ್ಲಿ ಕೊಯ್ಲು ತಡವಾಗಿದೆ. ಅಕ್ಕಿ ದಾಸ್ತಾನು ಇಲ್ಲದ ಹಿನ್ನೆಲೆಯಲ್ಲಿ ಬೆಲೆ ಹೆಚ್ಚಳವಾಗಿದೆ ಎಂದು ಎಫ್‌ಕೆಸಿಸಿಐನ ಎಪಿಎಂಸಿ ಸಮಿತಿಯ ಅಧ್ಯಕ್ಷ ರಮೇಶ್‌ಚಂದ್ರ ಲಹೋಟಿ ತಿಳಿಸಿದ್ದಾರೆ.

ಬಾಸುಮತಿ ಅಕ್ಕಿ ಬಿಟ್ಟರೆ ಉಳಿದ ಅಕ್ಕಿಗಳ ಬೆಲೆಯಲ್ಲಿ ಅಷ್ಟೊಂದು ರೀತಿಯ ವ್ಯತ್ಯಾಸವಾಗಿಲ್ಲ. ವಿಮಾನ ಬೆಚ್ಚ ಮತ್ತು ಪೂರೈಕೆ ಕಡಿಮೆಯಾದ ಹಿನ್ನೆಲೆಯಲ್ಲಿ ಕೆಲವೇ ಕೆಲವು ಅಕ್ಕಿಗಳ ಬೆಲೆಯಲ್ಲಿ 4ರಿಂದ 10ರೂ. ವರೆಗೂ ಏರಿಕೆ ಕಂಡು ಬಂದಿದೆ. ಆದರೆ ಸ್ಥಳೀಯ ಅಕ್ಕಿಗಳ ಬೆಲೆಯಲ್ಲಿ ಹೆಚ್ಚಳವಾಗಿಲ್ಲ ಎಂದು ಮಾಹಿತಿ ನೀಡಿದ್ದಾರೆ.

07-12-2021 Uv Pg 03

ಕೃಷಿ ಮೇಳ ಮುಂದೂಡಿಕೆ

ರಾಯಚೂರು: ರಾಜ್ಯದಲ್ಲಿ ಕೊರೊನಾ ರೂಪಾಂತರಿ ವೈರಸ್ ಓಮಿಕ್ರಾನ್ ಹರಡುತ್ತಿರುವ ಹಿನ್ನೆಲೆಯಲ್ಲಿ ಡಿ.18 ರಿಂದ ನಡೆಯಬೇಕಿದ್ದ ಕೃಷಿ ಮೇಳ ಮುಂದೂಡಲಾಗಿದೆ. ಸರಕಾರ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು, ಹಬ್ಬಗಳು, ಸಮಾರಂಭಗಳನ್ನು ಮುಂದಿನ ಜನವರಿ 15ರವರೆಗೆ ನಿಷೇಧಿಸಿ ಆದೇಶ ಹೊರಡಿಸಿದ್ದು, ಈ ಹಿನ್ನೆಲೆಯಲ್ಲಿ ಕೃಷಿ ಮೇಳ ರದ್ದಾಗಿದೆ ಎಂದು ಎಂದು ಕೃಷಿ ವಿವಿ ತಿಳಿಸಿದೆ.

07-12-2021 Vk Pg 02